ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 145-151
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ದೇವದಾಸಿಯರ ಬದುಕಿನ ಹಿನ್ನೆಲೆ ಮತ್ತು ಬದಲಾವಣೆಗಳು

**ಜ್ಯೋತಿ. ಎಮ್. ಸ್ವಾಮಿ[1] ಮತ್ತು ಡಾ.ಶಿವಲೀಲಾ ಬಸವರಾಜ[2]**
[1]ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
[2]ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಶ್ರೀ.ಜ.ರೇ.ಶ್ರೀಮತಿ.ನಾ.ಶಿ.ಕಮಲಾಪೂರ ಪ್ರಥಮ ದರ್ಜೆ ಕಾಲೇಜು, ಕಾಳಗಿ.

**Abstract:**

*ಶತಶತಮಾನಗಳಿಂದ ಮೇಲ್ವರ್ಗದ ಜನರ ಲೈಂಗಿಕ ಶೋಷಣೆಗೆ ತುತ್ತಾಗಿ, ಬಡತನ, ಅಜ್ಞಾನ, ಅಂಧಕಾರತ್ವ, ಅನಕ್ಷರತೆ, ಮೂಢನಂಬಿಕೆಗಳಿಗೆ ಒಳಗಾಗಿ ಅಸ್ಪೃಶ್ಯರು ಸಂಪ್ರದಾಯಗಳಿಗೆ ಜೋತು ಬಿದ್ದು, ತಮ್ಮ ಬದುಕಿನುದ್ದಕ್ಕೂ ನೋವುಗಳನ್ನು ಸಹಿಸಿಕೊಂಡು ಬಂದಿದ್ದಾರೆ. ಅನ್ಯಾಯ, ಅತ್ಯಾಚಾರದಂತಹ ಕೃತ್ಯಗಳು ಇವರ ಮೇಲೆ ನಡೆದುಹೋಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಸುಧಾರಣೆಯತ್ತ ಹೆಜ್ಜೆ ಇಡುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ದೇವದಾಸಿಯರ ಬದುಕಿನ ಹಿನ್ನೆಲೆ, ಬದಲಾವಣೆ ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆ–ಸವಾಲುಗಳನ್ನು ವಿಶ್ಲೇಷಿಸಲಾಗಿದೆ.*

**Keywords:** *ದೇವದಾಸಿ ಪದ್ಧತಿ, ದೇವದಾಸಿ, ಜೋಗತಿ, ಬಸವಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ.*

## ಪೀಠಿಕೆ

ದೇವದಾಸಿ ಎಂದರೆ ತನ್ನ ಜೀವನದುದ್ದಕ್ಕೂ ದೇವತೆ ಅಥವಾ ದೇವಸ್ಥಾನದ ಆರಾಧನೆ ಮತ್ತು ಸೇವೆಗೆ ಮೀಸಲಾಗಿರುವ ಮಹಿಳೆ. ದೇವದಾಸಿಯರು ದೇವಾಲಯದ ಪೂಜೆ, ಪುನಸ್ಕಾರಗಳು, ಬಂದ ಭಕ್ತಾದಿಗಳನ್ನು ಸಂರಕ್ಷಣೆ ಮಾಡುವ ಕಾರ್ಯ ನಿರ್ವಹಿಸುತ್ತಿದ್ದರು. ಹೀಗಾಗಿ ಅವರಿಗೆ ಸ್ವಂತ ಮನೆಗಳು ಕಾಣದೆ ದೇವಾಲಯಗಳೇ ಅವರ ಮನೆಗಳಾಗಿದ್ದವು. ನಂತರ ಈ ಪದ್ಧತಿ ವ್ಯಾಪಾರಿ ಮನೋವೃತ್ತಿಗೆ ತಿರುಗಿತು. ಪುರೋಹಿತಶಾಹಿಗಳು, ಮೇಲ್ವರ್ಗದವರು ತಮ್ಮ ಸ್ವಾರ್ಥ ಸುಖಕ್ಕಾಗಿ ಇವರನ್ನು ಶೋಷಣೆ ಮಾಡತೊಡಗಿದರು. ಇತಿಹಾಸ ಕಾಲದಲ್ಲಿ ಅರಸರ, ಸಾಮಂತರ, ಸರದಾರರ ಸೇವೆಗೆ ಬಂದು ಮುಂದೆ ಅವರ ಬದುಕು ಅಧೋಗತಿಗೆ ಇಳಿಯಿತು. ಪ್ರಾರಂಭದಲ್ಲಿದ್ದ ಪ್ರತಿಷ್ಠೆಯು ಕಳೆದು ಹೋಯಿತು. ಹಾಗಾಗಿ ದೇವದಾಸಿಯರು ಬೀದಿ ಪಾಲಾಗಿ ವೇಶ್ಯಾವೃತ್ತಿಗಿಳಿದು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಲೈಂಗಿಕ ಕಾರ್ಯಕರ್ತೆಯರಾಗಿ ಕೆಲಸ ಮಾಡ ತೊಡಗಿದರು. ಹೀಗಾಗಿ ಅವರಿಗೆ ಯಾವುದೇ ಆದಾಯವಿಲ್ಲದ್ದರಿಂದ ಸರಿಯಾದ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗಲಿಲ್ಲ. ಬಡತನದಲ್ಲಿ ನೊಂದು ಬೆಂದು ಜೀವನ ನಡೆಸುವುದೇ ಬಹು ಕಷ್ಟಮಯವಾಗಿತ್ತು. ಹಾಗಾಗಿ ಅವರ ಮನೆಗಳು ಗುಡಿಸಲುಗಳಾಗಿದ್ದವು. ಇವರು ಹೆಚ್ಚಾಗಿ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದರು. ಇನ್ನೂ ಕೆಲವರು ದೇವದಾಸಿಯರನ್ನಿಟ್ಟುಕೊಂಡ ಮಾಲೀಕರು ಇವರಿಗೆ ಮನೆ ಕಟ್ಟಿಸಿಕೊಟ್ಟರು. ಕಾಲಕ್ರಮೇಣ ಸಂಘಸಂಸ್ಥೆಗಳು ತಲೆ ಎತ್ತಿದವು. ಅವು ದೇವದಾಸಿಯರ ಸಮಸ್ಯೆಗಳ ಕುರಿತು ಪ್ರತಿಭಟನೆ ಮಾಡಿ ಸರ್ಕಾರದ ಗಮನಕ್ಕೆ

**Please cite this article as:** ಜ್ಯೋತಿ. ಎಮ್. ಸ್ವಾಮಿ ಮತ್ತು ಶಿವಲೀಲಾ ಬಸವರಾಜ. (2023). ದೇವದಾಸಿಯರ ಬದುಕಿನ ಹಿನ್ನೆಲೆ ಮತ್ತು ಬದಲಾವಣೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 145–151.

ತಂದವು. ಆಗ ಸರ್ಕಾರ ಎಚ್ಚೆತ್ತುಕೊಂಡು ಪುನರ್ವಸತಿಯ ಅಡಿಯಲ್ಲಿ ಹಲವಾರು ಯೋಜನೆಗಳು ಹಾಕಿಕೊಂಡು ಇವರಿಗೆ ಮನೆಗಳನ್ನು ನಿರ್ಮಿಸಿಕೊಟ್ಟಿತು.

ಪ್ರಾರಂಭದಲ್ಲಿ ದೇವದಾಸಿಯರನ್ನು ಗೌರವ ಭಾವನೆಯಿಂದ ಕಾಣಲಾಗುತ್ತಿತ್ತು. ದೇವದಾಸಿ, ಜೋಗತಿ, ಬಸವಿಯರನ್ನು ಹಬ್ಬ, ಹುಣ್ಣಿಮೆ, ಮದುವೆಗೆ ಕರೆಯುತ್ತಿದ್ದರು. ಎಮ್ಮೆ ಅಥವಾ ಹಸು ಹಾಕಿದರೆ ಅದರ ಹಾಲು ತುಪ್ಪ ಮಾಡಿ ಊಟಕ್ಕೆ ಆಹ್ವಾನಿಸುತ್ತಿದ್ದರು. ಜೋಗತಿಯರು ತುಪ್ಪ ತಿಂದ ಮೇಲೆ ಹಾಲನ್ನು ಬೇರೆಯವರಿಗೆ ಕೊಡುತ್ತಿದ್ದರು. ಹರಕೆ ಮಾಡಿಕೊಂಡಿರುವ ಜನ ಮದುವೆಯ ದಿನ ಮದುಮಗನಿಗೆ ಉಟ್ಟಿಗೆ ಉಡಿಸುವುದಕ್ಕೆ ಕರೆಯುತ್ತಿದ್ದರು. ಅವನು ಉಟ್ಟಿಗೆ ಉಟ್ಟ ನಂತರ ಮದುವೆ ಕಾರ್ಯ ಮಾಡುತ್ತಿದ್ದರು. ಇಂತಹ ಕಾರ್ಯಗಳು ಮಾಡಿದರೆ, ಹೋಳಿಗೆ ಊಟ ಹಾಕಿ ಸೀರೆ ಕುಪ್ಪಸ ಕೊಟ್ಟು ಗೌರವಿಸುತ್ತಿದ್ದರು. ಶೋಷಣೆಗಳ ಮಧ್ಯದಲ್ಲಿಯೂ ಸಮಾಜದಲ್ಲಿ ಇವರಿಗೆ ಗೌರವ ಭಾವನೆ ಇತ್ತೆಂದು ಹೇಳಬಹುದು.

ಕಾಲ ಗತಿಸಿದಂತೆ ದೇವದಾಸಿ ಸ್ವರೂಪ ಬದಲಾಗಿ ಅದೊಂದು ವೃತ್ತಿಯಾಗಿ ಮಾರ್ಪಟ್ಟಿತು. ದೇವದಾಸಿಯರನ್ನು ಜನರು ಕಾಮ ದೃಷ್ಟಿಯಿಂದಲೇ ನೋಡಲಾರಂಭಿಸಿದರು. ಇವರನ್ನು ಇಟ್ಟುಕೊಂಡವರು ಕೊನೆಯ ತನಕ ಇಟ್ಟುಕೊಳ್ಳುತ್ತಿದ್ದರು. ಇನ್ನು ಕೆಲವರು ಬೇಡವೆನಿಸಿದಾಗ ಬಿಡುತ್ತಿದ್ದರು. ಇವರಿಗೆ ಹುಟ್ಟುವ ಮಕ್ಕಳು ಅಪ್ಪ ಎಂದು ಕರೆಯುವಂತಿರಲಿಲ್ಲ ಹಾಗೂ ಅವರ ಆಸ್ತಿಯಲ್ಲಿ ಪಾಲು ಕೇಳುವಂತಿರಲಿಲ್ಲ. ಶಾಲೆಗೆ ಸೇರಿಸುವಾಗ ತಂದೆಯ ಹೆಸರನ್ನು ಬರೆಸುವಂತಿರಲಿಲ್ಲ. ತಂದೆ ಇಲ್ಲದವರು ಎಂದು ಅಪಮಾನಕ್ಕೆ ಗುರಿಯಾಗುತ್ತಿದ್ದರು.

ಹೀಗೆ ಹಲವಾರು ವರ್ಷಗಳ ಕಾಲ ತಮ್ಮ ಹೊಟ್ಟೆಪಾಡಿಗೋಸ್ಕರ ಮಾಡಿದ ಕೆಲಸ ಮತ್ತು ಮೇಲ್ವರ್ಗದ ಜನರ ಲೈಂಗಿಕ ಶೋಷಣೆಗೆ ಗುರಿಯಾಗಿ ಮೋಸಗೊಂಡು, ಸಮಾಜದಲ್ಲಿ ಮಾನ ಮರ್ಯಾದೆ ಇರಲಾರದೆ ಒಂದು ರೀತಿ ನಿರ್ಗತಿಕರಾಗಿ ಬದುಕು ನಡೆಸಿಕೊಂಡು ಬಂದಿರುವುದು ಅನಿವಾರ್ಯವಾಗಿತ್ತೆಂದು ಹೇಳಬಹುದು.

**ಕುಟುಂಬದ ಪದ್ಧತಿಗಳು**

ಅಧಿಕಾರ, ವಂಶವನ್ನು ಗುರುತಿಸುವ ವಿಧಾನ, ಸಂಗಾತಿಗಳ ವಾಸಸ್ಥಾನ ಮುಂತಾದ ಆಧಾರಗಳ ಮೇಲೆ ಕುಟುಂಬದಲ್ಲಿ ಮಾತೃಪ್ರಧಾನ ಕುಟುಂಬ ಮತ್ತು ಪಿತೃಪ್ರಧಾನ ಕುಟುಂಬ ಎಂಬ ಎರಡು ಕಟ್ಟುನಿಟ್ಟಾದ ಭಾಗಗಳನ್ನು ಮಾಡಲು ಬರುವಂತಿಲ್ಲ. ಇವೆರಡರ ಛಾಯೆಯನ್ನು ಪಡೆದ ಕುಟುಂಬಗಳು ಅನೇಕವಿರುತ್ತವೆ. ಹಾಗೆಯೆ ದೇವದಾಸಿಯರ ಕುಟುಂಬಗಳಲ್ಲಿ ಮಾತೃಪ್ರಧಾನ ಕುಟುಂಬ ಈ ಹಿಂದೆ ಜಾರಿಯಲ್ಲಿತ್ತು. ಅದು ಹಲವಾರು ವರ್ಷಗಳ ಕಾಲ ಮುಂದುವರೆದುಕೊಂಡು ಬಂದು ಇಂದು ಪಿತೃಪ್ರಧಾನ ಕುಟುಂಬಕ್ಕೆ ಪ್ರಾಧ್ಯಾನ್ಯತೆ ಕೊಡುತ್ತಿದೆ. ಇನ್ನೂ ಕೆಲವು ಕುಟುಂಬಗಳಲ್ಲಿ ಮಾತೃಪ್ರಧಾನ ಕುಟುಂಬ ಜಾರಿಯಲ್ಲಿದೆ ಎಂದು ಹೇಳಬಹುದು.

**ಮಾತೃಪ್ರಧಾನ ಕುಟುಂಬ**

ದೇವದಾಸಿಯರ ಕುಟುಂಬಗಳಲ್ಲಿ ಮಾತೃಪ್ರಧಾನ ಕುಟುಂಬಕ್ಕೆ ಹೆಚ್ಚಿನ ಆದ್ಯತೆ ಇತ್ತು. ಕುಟುಂಬದ ಯಜಮಾನಿ ಮನೆಯ ಹಿರಿಯ ದೇವದಾಸಿ ಆಗಿರುತ್ತಿದ್ದಳು, ಅಧಿಕಾರ ವಂಶಪಾರಂಪರ್ಯವಾಗಿ, ತಾಯಿಯಿಂದ ಮಗಳಿಗೆ ವರ್ಗಾಯಿಸುತ್ತ ಮನೆಯ ಧಾರ್ಮಿಕ ಕ್ರಮಾದಿಗಳು ನಡೆಸುವ ಅಧಿಕಾರ ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಸಾಕಿ ಸಲಹುದು ಹೊಣೆ ಹೊತ್ತು ಮನೆಯ ಎಲ್ಲಾ ವ್ಯವಹಾರಗಳನ್ನು ಸಮರ್ಥ ರೀತಿಯಲ್ಲಿ ನಿಭಾಯಿಸುತ್ತಾ, ತಂದೆ ತಾಯಿಯಾಗಿ ತನ್ನ ಮಕ್ಕಳಿಗೆ ದ್ವಿಪಾತ್ರವನ್ನು ನಿರ್ವಹಿಸುತ್ತಾ ಬಂದಿರುವುದು ಗಮನಾರ್ಹ. ಇವರ ಕುಟುಂಬದಲ್ಲಿ ಹೆಣ್ಣು ಸಂತಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು. ‘ಹೆಣ್ಣು ಹುಟ್ಟಿದರೆ’ ಸಂಭ್ರಮಪಡುತ್ತಿದ್ದರು. ಮಗುವನ್ನು ಬಹು

ಜೋಪಾನವಾಗಿ ಸಾಕಿ ನಾಮಕರಣವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಆ ಮಗು ಮನೆಯ ಆಸ್ತಿಯಂತೆ ಭಾವಿಸಿ ನಮಗೆ ಕಷ್ಟ ಸುಖಗಳಲ್ಲಿ ಸಹಾಯ ಆಗುವ ಕುಲದೀಪಿಕೆ ಎಂಬ ಮನೋಭಾವನೆಯಿತ್ತು. ಆದರೆ ಗಂಡುಮಕ್ಕಳ ಬಗ್ಗೆ ಅಂತಹ ನಂಬಿಕೆ ಇರಲಿಲ್ಲ. ಗಂಡು ಮಗುವಿನ ಹುಟ್ಟು ಆಲಸ್ಯವನ್ನುಂಟು ಮಾಡುತ್ತದೆ ಎನ್ನುವುದು ಅವರ ಮನೋಧೋರಣೆಯಾಗಿತ್ತು. ಈಗಲೂ ಹಲವಾರು ಕುಟುಂಬಗಳಲ್ಲಿ ಮುಂದುವರೆಯುತ್ತಲೇ ಇದೆ. ಆದರೆ ಇಂದು ಸಾಮಾಜೀಕರಣಗೊಂಡು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಹೀಗೆ ಮುಂತಾದ ಅಂಶಗಳಲ್ಲಿ ಜಾಗೃತಗೊಂಡು ಪ್ರಸ್ತುತ ದೇವದಾಸಿಯರು ಮಾತೃಸ್ಥಾನ ಕುಟುಂಬವನ್ನು ತೊರೆದು, ತಮ್ಮ ಗಂಡು ಮಕ್ಕಳಿಗೆ ಕುಟುಂಬದ ಅಧಿಕಾರ ಮತ್ತು ಜವಾಬ್ದಾರಿಯನ್ನು ವಹಿಸಿಕೊಡುತ್ತಿದ್ದಾರೆ. ಆದ್ದರಿಂದ ಮಾತೃಪ್ರಧಾನ ಕುಟುಂಬದ ಬದಲು ಪಿತೃಪ್ರಧಾನ ಕುಟುಂಬ ಜಾರಿಯಲ್ಲಿ ಬರುತ್ತಿರುವುದು ಕಂಡುಬರುತ್ತದೆ.

**ಪಿತೃಪ್ರಧಾನ ಕುಟುಂಬ**

ದೇವದಾಸಿಯರ ಕುಟುಂಬಗಳಲ್ಲಿ ಪಿತೃಪ್ರಧಾನ ಕುಟುಂಬಗಳಿದ್ದರೂ ಸಂಪೂರ್ಣ ಅಧಿಕಾರ ಮಹಿಳೆಯದಾಗಿತ್ತು. ಏಕೆಂದರೆ ಅತಿಯಾದ ಬಡತನ, ತಂದೆಯಾದವನು ಕೂಲಿ ಮಾಡಿ ಮಕ್ಕಳನ್ನು ಸಾಕಲು ಸಾಧ್ಯವಾಗದಿದ್ದ ಪರಿಸ್ಥಿತಿಯಲ್ಲಿ ಹೆಣ್ಣು ಮಗುವನ್ನು ದೇವರಿಗೆ ಅರ್ಪಿಸಿ ಅವಳನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದರು. ಹೀಗಾಗಿ ಪುರುಷ ಕೇವಲ ಹೆಸರಿಗೆ ಮಾತ್ರ ಯಜಮಾನನಾಗಿರುತ್ತಿದ್ದನೆಂದು ಹೇಳಬಹುದು. ಇಂದು ದೇವದಾಸಿಯರ ಮಕ್ಕಳು ಸುಶಿಕ್ಷತರಾಗಿ, ವಿದ್ಯಾವಂತರಾಗಿ, ಬುದ್ಧಿವಂತರಾಗಿ, ದೇವದಾಸಿ ವೃತ್ತಿಯನ್ನು ಬಿಡಿಸಿ ತಾವು ಮನೆಯ ಅಧಿಕಾರವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಹಾಗಾಗಿ ಹೆಚ್ಚು ಕುಟುಂಬಗಳಲ್ಲಿ ಪಿತೃಪ್ರಧಾನ ಪದ್ಧತಿ ರೂಢಿಗೆ ಬರುತ್ತಿದೆ. ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗೆ ಬಲಿಯಾಗಿರುವ ಕುಟುಂಬಗಳಲ್ಲಿ ಮಾತೃಪ್ರಧಾನ ಕುಟುಂಬ ಜಾರಿಯಲ್ಲಿರುವುದು ಇವತ್ತಿಗೂ ಕಂಡುಬರುತ್ತಿದೆ.

**ಬಂಧುತ್ವ**

ಪ್ರಾರಂಭದಲ್ಲಿ ದೇವದಾಸಿಯರು ತಮ್ಮ ಕುಟುಂಬದೊಂದಿಗೆ ಬಹಳ ಆತ್ಮೀಯತೆಯಿಂದ ಇರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅಣ್ಣನ ಆಥವಾ ತಮ್ಮನ ಮದುವೆಯಾದ ನಂತರ ಸೊಸೆಯಾಗಿ ಬರುವ ಹೆಣ್ಣು ಮಗಳು ಇವರೊಂದಿಗೆ ಬದುಕಲು ಇಚ್ಛಿಸದ ಕಾರಣ ಪ್ರತ್ಯೇಕವಾಸ ಮಾಡುವುದು ಕಂಡು ಬರುತ್ತಿದೆ. ಇಲ್ಲವಾದರೆ ದೇವದಾಸಿ ಮಹಿಳೆಗೆ ಮಾನಸಿಕ ಕಿರುಕುಳ ನೀಡಿ ಪ್ರತ್ಯೇಕ ಮನೆ ಮಾಡುವಂತೆ ಹೇಳುತ್ತಾರೆ.

**ಒಳಬಾಂಧವ್ಯ**

ತಮ್ಮ ಹೆಣ್ಣುಮಕ್ಕಳನ್ನು ದೇವರಿಗೆ ಅರ್ಪಿಸಿ, ದೇವರ ಹೆಸರಿನಲ್ಲೇ ಸೇವೆ ಮಾಡುತ್ತಾ, ತನ್ನ ಬದುಕಿಗಾಗಿ ಯಾವ ಜಾತಿಯವರೇ ಆಗಿರಲಿ, ರೋಗಿಯಾಗಿರಲಿ, ಮುದುಕನಾಗಿರಲಿ, ಅವರ ಜೊತೆ ಲೈಂಗಿಕ ಸಂಬಂಧ ಹೊಂದಿ ಸಂಪಾದಿಸಿ ಜೀವನ ನಿರ್ವಹಿಸುತ್ತಿದ್ದರು.

ಆದರೆ ಇತ್ತೀಚಿಗೆ ಸರ್ಕಾರ ಈ ಪದ್ಧತಿಯನ್ನು ನಿಷೇಧಿಸಿದೆ. ಹಾಗೂ ದೇವದಾಸಿ ಅಥವ ಆಕೆಯ ಕುಟುಂಬದವರನ್ನು ವಿವಾಹವಾದರೆ ಅಂತಹವರಿಗೆ ಉಚಿತ ಮದುವೆ ಮತ್ತು ಸಹಾಯಧನವನ್ನು ನೀಡುತ್ತಿದೆ. ಇದರಿಂದಾಗಿ ಇತ್ತೀಚಿನ ದಿನಗಳಲ್ಲಿ ತಮ್ಮ ಸಂಬಂಧಿಕರ ನಡುವೆಯೇ ಒಳ್ಳೆಯ ವರನನ್ನು ಹುಡುಕಿ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡುತ್ತಿರುವುದು ಕಂಡು ಬರುತ್ತಿದೆ.

**ಹೊರಬಾಂಧವ್ಯ**

ಇವರು ಹೆಚ್ಚಾಗಿ ಹೊರಬಾಂಧವ್ಯಗಳಲ್ಲಿ ಸಂಬಂಧ ಬೆಳಸಲು ಇಷ್ಟಪಡುವುದಿಲ್ಲ, ಏಕೆಂದರೆ ಈ ಹಿಂದೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಹಾಗಾಗಿ ಯಾರ ಜೊತೆಗೆ ಇವರು ಸಂಬಂಧವನ್ನು

ಹೊಂದಿರುತ್ತಾರೋ ಅವರನ್ನೇ ಮದುವೆ ಮಾಡಿಕೊಂಡಿರುವ ನಿದರ್ಶನಗಳಿವೆ. ಅಷ್ಟು ಮಾತ್ರ ಬಿಟ್ಟರೆ, ಇನ್ನಾವುದೇ ರೀತಿ ಬೇರೆ ಜಾತಿ ಜನಾಂಗಗಳ ಜೊತೆ ಸಂಬಂಧ ಬೆಳೆಸುವುದಿಲ್ಲ ಎಂದು ಖಚಿತವಾಗಿ ಹೇಳುತ್ತಾರೆ.

**ವಿವಾಹ ಪದ್ಧತಿ**

ದೇವರಿಗೆ ಅರ್ಪಿಸುತ್ತಿದ್ದ ದೇವದಾಸಿಯರನ್ನು ಬಸವಿಯರು, ಜೋಗತಿಯರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ದೇವದಾಸಿ ಪದ್ಧತಿ ಹೆಚ್ಚಾಗಿ ತಳ ಸಮುದಾಯಗಳಲ್ಲೇ ಕಂಡುಬರುತ್ತದೆ. ಮೂಲತಃ ಬಡತನ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳಿಂದ ಈ ಸಮುದಾಯಗಳ ಹೆಣ್ಣು ಮಕ್ಕಳನ್ನು ಮೇಲ್ವರ್ಗದವರು ತಮ್ಮ ಅಧಿಕಾರವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ದೇವದಾಸಿಯರನ್ನು ದೇವರಿಗೆ ಅರ್ಪಿಸುವುದೇ ಒಂದು ಮದುವೆ ರೂಪವಾಗಿತ್ತು. ಮದುವೆ ಸಂದರ್ಭದಲ್ಲಿ ಮತ್ತು ಮದುವೆ ಮುಗಿದ ನಂತರ ಹಲವಾರು ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು ಹಾಗೂ ದೇವರಿಗೆ ಬಿಡುವುದಕ್ಕೆ ಹಲವಾರು ಕಾರಣಗಳಿದ್ದವು. ಮಕ್ಕಳಾಗದೆ ಇರುವವರು ಹೆಣ್ಣುಮಕ್ಕಳು ಜನಿಸಿದರೆ ಜೋಗತಿಯಾಗಿ ಬಿಡುತ್ತೇವೆ ಎಂತಲೂ, ಹೆಣ್ಣು ಮಕ್ಕಳಿರುವವರು ಗಂಡು ಸಂತಾನವಾಗಲೆಂತಲೂ, ಮೊದಲನೇ ಮಗಳನ್ನು ಜೋಗತಿಯಾಗಿ ಬಿಡುತ್ತಿದ್ದರು. ಅಲ್ಲದೆ ಕುಟುಂಬದಲ್ಲಿ ಸಂಕಷ್ಟವಾದರೂ ಕೂಡ ಎಲ್ಲಮ್ಮ ತಾಯಿಗೆ ತಮ್ಮ ಹೆಣ್ಣು ಮಕ್ಕಳನ್ನು ಜೋಗತಿ ಬಿಡುವುದಾಗಿ ಹರಕೆ ಹೊರುತ್ತಿದ್ದರು.

ಕುಟುಂಬದಲ್ಲಿ ಏನಾದರೂ ತೊಂದರೆ ಉಂಟಾದಾಗ ಜನರು ಅದರಲ್ಲೂ ದಲಿತ ಮತ್ತು ಶೋಷಿತರು ಪೂಜಾರಿ ಅಥವ ಜಡೆ ಒಡೆದ ಗರತಿ ಮುತ್ತಿನ ಜೋಗತಿಯರ ಬಳಿ ಹೋಗುತ್ತಿದ್ದರು. ಜೋಗತಿಯರ ಮೈಮೇಲೆ ಎಲ್ಲಮ್ಮ ಬಂದು ಸಮಸ್ಯೆಗಳ ಪರಿಹಾರಕ್ಕೆ ಕುಟುಂಬದ ಹೆಣ್ಣುಮಗುವೊಂದನ್ನು ಜೋಗತಿಯಾಗಿ ಬಿಟ್ಟರೇ ನಿಮ್ಮ ಕಷ್ಟಗಳು ಪರಿಹಾರವಾಗುತ್ತವೆ ಎಂಬ ಆಶ್ವಾಸನೆಯನ್ನು ನಂಬಿಕೊಂಡು ಯಾವುದೇ ಆಲೋಚನೆ ಮಾಡದೇ ತಮ್ಮ ಹೆಣ್ಣು ಮಕ್ಕಳನ್ನು ಜೋಗತಿಯರನ್ನಾಗಿ, ದೇವದಾಸಿಯನ್ನಾಗಿ ಬಿಡುತ್ತಿದ್ದರು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಆದರೆ ಇತ್ತೀಚೆಗೆ ದೇವದಾಸಿಯರು ತಮ್ಮ ಹೆಣ್ಣುಮಕ್ಕಳನ್ನು ದೇವರಿಗೆ ಬಿಡದೇ ಒಳ್ಳೆಯ ವರ ನೋಡಿ ಮದುವೆ ಮಾಡಿಕೊಡುತ್ತಿದ್ದಾರೆ. ತಮ್ಮ ರಕ್ತಸಂಬಂಧಿಕರಲ್ಲೇ ವರ ನೋಡಿ, ಜನಸಾಮಾನ್ಯರ ಹಾಗೇ ವರನ ತಂದೆ ತಾಯಿಗಳು ಕೊಡುವ ಹೆಣ್ಣು ಎಲ್ಲೆಲ್ಲಿ ಇವೆ ಎಂಬುದನ್ನು ತಿಳಿದುಕೊಂಡು ಅದಕ್ಕಾಗಿ ಒಳ್ಳೆಯ ದಿನವೊಂದನ್ನು ನಿಗದಿಪಡಿಸಿಕೊಂಡು, ಹೆಣ್ಣಿನ ಕಡೆಯವರಿಗೂ ತಿಳಿಸಿ, ಕೇರಿಯಲ್ಲಿಯ ಅಣ್ಣ–ತಮ್ಮರನ್ನು ಕರೆದುಕೊಂಡು, ಹೆಣ್ಣು ನೋಡಲು ಹೋಗುತ್ತಾರೆ. ಹೀಗೆ ಹೋಗುವಾಗ ಯಾವುದೇ ಅಶುಭ ಘಟನೆಗಳು ಘಟಿಸಬಾರದೆಂದು ಹೇಳುತ್ತಾರೆ. ಹೂವು, ಕುಂಕುಮ, ಎಲೆ ಅಡಿಕೆಗಳನ್ನು ತೆಗೆದುಕೊಂಡು ಎಂಟತ್ತು ಜನರು ಹೆಣ್ಣಿನ ಮನೆಗೆ ಹೋಗುತ್ತಾರೆ. ಆ ನಂತರ ಸಿಂಗರಿಸಿಕೊಂಡ ವಧು ಪರೀಕ್ಷೆಗಾಗಿ ಬಂದವರ ಎದುರು ಕಂಬಳಿ ಇಲ್ಲವೆ ಮಣೆಯ ಮೇಲೆ ಕುಳಿತುಕೊಳ್ಳುತ್ತಾರೆ. ಆಗ ಕನ್ಯೆಯನ್ನು ನೋಡುವ, ಪರೀಕ್ಷಿಸುವ ಕಾರ್ಯ ಆರಂಭವಾಗುತ್ತದೆ. ಕನ್ಯೆ ತಮಗೆ ಇಷ್ಟವಾದರೆ ಕನ್ಯೆಯ ಮನೆಯವರು ಹುಡುಗನ ಮನೆ ನೋಡಲು ಬರುತ್ತಾರೆ. ಅವರಿಗೂ ಒಪ್ಪಿಗೆಯಾದರೆ ಎರಡೂ ಕುಟುಂಬದವರು ನಿಶ್ಚಿತಾರ್ತ ಮಾಡಿಕೊಂಡು ಶುಭ ದಿನದಂದು ವಿವಾಹ ಏರ್ಪಡಿಸಲಾಗುತ್ತದೆ.

ಸಂಪ್ರದಾಯದಂತೆ ದೇವದಾಸಿಯರು ಕೇವಲ ಒಬ್ಬ ಪುರುಷನನ್ನು ವಿವಾಹವಾಗುವಂತಿಲ್ಲ. ಆದರೆ, ಸರಕಾರದ ಕಲ್ಯಾಣ ಮತ್ತು ಅರಿವು ಕಾರ್ಯಕ್ರಮಗಳ ಫಲಿತಾಂಶದಿಂದ, ದೇವದಾಸಿಯರು ವಿವಾಹವಾಗಿ ಸಂಸಾರ ನಡೆಸುತ್ತಿದ್ದಾರೆ. ಕೋಷ್ಟಕ 1ರಲ್ಲಿ ದೇವದಾಸಿಯರ ವೈವಾಹಿಕ ಸ್ಥಾನಮಾನವನ್ನು

ನೀಡಲಾಗಿದೆ. ಕೋಷ್ಟಕದ ಪ್ರಕಾರ ಸಂದರ್ಶಿಸಲಾದ ದೇವದಾಸಿಯರಲ್ಲಿ ಶೇ.50ರಷ್ಟು ವಿವಾಹಿತರಾಗಿದ್ದು, ಶೇ.29ರಷ್ಟು ಅವಿವಾಹಿತರಾಗಿದ್ದಾರೆ. ಇನ್ನುಳಿದಂತೆ ಶೇ.14.3 ರಷ್ಟು ವಿಧವೆಯರಿದ್ದು, ಶೇ.6.7 ರಷ್ಟು ವಿಚ್ಛೇಧಿತರಾಗಿದ್ದಾರೆ.

**ಕೋಷ್ಟಕ 1: ವೈವಾಹಿಕ ಸ್ಥಾನಮಾನ:**

| ವೈವಾಹಿಕ ಸ್ಥಾನಮಾನ | ಆವೃತ್ತಿ | ಶೇಕಡ |
|---|---|---|
| ಅವಿವಾಹಿತರು | 81 | 29.0 |
| ವಿವಾಹಿತರು | 140 | 50.0 |
| ವಿಧವೆಯರು/ಬಿಟ್ಟು ಹೋದವರು | 40 | 14.3 |
| ಸ್ವಂತ/ವಿಚ್ಛೇಧನ | 19 | 6.7 |
| ಒಟ್ಟು | 280 | 100.0 |

**ದೇವದಾಸಿ ಪದ್ಧತಿಯ ವಿರುದ್ಧ ಹೋರಾಟ**

ಈ ಪದ್ಧತಿ ಸಂಪೂರ್ಣವಾಗಿ ನಿಷೇಧಿಸಬೇಕೆಂದು ಸರ್ಕಾರ ದೇವದಾಸಿಯರ ಸುಧಾರಣೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಸಮೂಹ ಮಾಧ್ಯಮಗಳು, ಸಂಶೋಧಕರು, ಹೋರಾಟಗಾರರು, ದೇವದಾಸಿಯರ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದಾರೆ. ಇದರ ಫಲವಾಗಿ ಇತ್ತೀಚಿನ ದಿನಗಳಲ್ಲಿ ದೇವದಾಸಿ ಪದ್ಧತಿಯನ್ನು ವಿರೋಧ ವ್ಯಕ್ತಪಡಿಸುವುದು ಕಂಡು ಬರುತ್ತಿದೆ. ದೇವದಾಸಿಯೊಬ್ಬರನ್ನು ಸಂದರ್ಶಿಸಿದಾಗ "ಆಗಿನ ಪರಿಸ್ಥಿತಿ ನಮಗೆ ಗೊತ್ತಿದ್ದಿಲ್ಲರೀ ಮುತ್ತು ಕಟ್ಟಾದು ಗೊತ್ತಿದ್ದು ತಿಳಿವಳಿಕೆ ಇರಲಿಲ್ಲ. ಅಗದೀ ಸಣ್ಣವರು, ಅದು ಹ್ಯಾಂಗ್ ಮಾಡ್ತಾರ, ಮ್ಯಾನ್ ಮಾಡ್ತಾರೋ ಹಿಂಗ್ಯಾಕ ಮಾಡ್ತಾರೋ, ಇದು ನಮಗೆ ಗೊತ್ತಿದ್ದಿಲ್ಲ. ಎಲ್ಲರೂ ಸವದತ್ತಿ ಜಾತ್ರೆಗೆ ಹೋಗತ್ತಿದ್ದರು ನಾವು ಹೋಗತ್ತಿದ್ದೆವು. ಇದೆಲ್ಲ ತಿಳಿವಳಿಕೆ ಇದ್ರ ಯಾಕ ನಮಗ ಹಿಂಗ್ ಬಿಡ್ತಾ ಇದ್ದೀರಿ ಅಂತ ನಾವು ಕೇಳುತ್ತಿದ್ದೇವು, ಆದರೆ ತಿಳಿವಳಿಕೆನೆ ಇರಲಿಲ್ಲ" ಎಂದು ತಮ್ಮ ಸಂಕಷ್ಟವನ್ನು ತೋಡಿಕೊಂಡರು. ಮತ್ತೊಬ್ಬ ದೇವದಾಸಿ ಮಹಿಳೆ "ಈಗ ಅವ್ವ ಅಪ್ಪನ ಬೈತಿವು ಅಳತೇವು ಕರಿತೇವು ನಮಗ ಮದುವೆನಾ ಮಾಡಿ ಕೊಡಬ್ಯಾಡದೇನ ಅಂತೇವು. ಅವರು ಸತ್ತರು ನಮಗ ಇಲ್ಲಿ ಉರುಳು ಹಾಕಿ ಹೋದ್ರು ಎಂದು ತಂದೆ ತಾಯಿಗಳಿಗೆ ಶಾಪ ಹಾಕುತ್ತಾರೆ. ನಮ್ಮ ಮಕ್ಕಳಿಗೆ ಬಿಟ್ರ ನಮ್ಮಂಗ ಆದಿತಲ್ಲಾ ಎಂದು ಭಯಪಟ್ಟು ಬೇಗ ಮದುವೆ ಮಾಡಿದ್ದೇವೆ." ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟರು. ಹಿಂದಿನ ಕಾಲದಲ್ಲಿದ್ದ ಬಡತನ, ಶೋಷಣೆ, ಅನಕ್ಷರತೆ, ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡು ಸವರ್ಣೀಯ ಸಮುದಾಯಗಳು ದುರುಪಯೋಗ ಪಡಿಸಿಕೊಂಡ ಬಗೆ ಮತ್ತು ತಿಳಿವಳಿಕೆ ಬಂದ ನಂತರ ದೇವದಾಸಿ ಪದ್ಧತಿಯಿಂದ ವಿಮುಖರಾಗುತ್ತಿರುವುದು ಕಂಡು ಬಂದಿದೆ. ಆದರೆ ಸಾವಿರಾರು ವರ್ಷಗಳ ಕಾಲ ಸಮಾಜದ ನಿಂದನೆಗೆ ಗುರಿಯಾಗಿರುವ ಇವರನ್ನು ಸರ್ಕಾರ ಸಂಘ ಸಂಸ್ಥೆಗಳು ದೇವದಾಸಿಯರ ಸುಧಾರಣೆಗೋಸ್ಕರ ಹಲವಾರು ಹೋರಾಟ, ಪ್ರತಿಭಟನೆ ಮಾಡುತ್ತಾ ಅನೇಕ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಮತ್ತು ಸರ್ಕಾರ 1982ರಲ್ಲಿ ದೇವದಾಸಿ ಸಮರ್ಪಣಾ ನಿಷೇಧ ಕಾಯ್ದೆ ಜಾರಿಗೆ ತಂದಿರುವುದರ ಪ್ರಯುಕ್ತ ಅವರಲ್ಲಿ ದೇವದಾಸಿ ಪದ್ಧತಿ ನಿಂತು ಹೋಗಿದೆ.

**ದೇವದಾಸಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು**

ಅಮಾಯಕ, ಅಜ್ಞಾನ, ಅನಕ್ಷರತೆ, ಅಂಧಕಾರತ್ವದಿಂದ ಕೂಡಿದ ಜನರನ್ನು ದೇವರ ಹೆಸರಲ್ಲಿ ಭಯ ಹುಟ್ಟಿಸಿ ದೇವದಾಸಿಯಾಗುವಂತೆ ಪ್ರೇರೇಪಿಸಿ ಅವರನ್ನು ದೈಹಿಕ ಸುಖಕ್ಕಾಗಿ ಬಳಸಿಕೊಂಡು ಲೈಂಗಿಕ ಶೋಷಣೆಗೆ ಒಳಪಡಿಸಿರುವುದನ್ನು ಕಾಣಬಹುದಾಗಿದೆ. ಒಬ್ಬರ ನಂತರ ಇನ್ನೊಬ್ಬ ಹೀಗೆ ಮಗದೊಬ್ಬ ಕಾಲನಂತರದಲ್ಲಿ ಇದೊಂದು ವ್ಯಾಪಾರಿ ಮನೋವೃತ್ತಿಗೆ ಇಳಿದು ಇಂದಿಗೂ ಅನೇಕ ಸಮಸ್ಯೆಗಳು ಸವಾಲುಗಳಾಗಿ ಸಮಾಜವನ್ನು

ಕಾಡುತ್ತಿದೆ. ಸಮಾಜದಲ್ಲಿ ಇಂದಿಗೂ ದೇವದಾಸಿಯರನ್ನು ಕೀಳರಿಮೆಯಿಂದ ನೋಡುತ್ತಿರುವುದರಿಂದ ಮುಜುಗರದಿಂದ ಬದುಕುವಂತಾಗಿದೆ. ಅವರ ಮಕ್ಕಳನ್ನು ಅಪ್ಪನಿಲ್ಲದ ಮಕ್ಕಳೆಂದು ಅಪಮಾನಿಸುವುದು, ಶಾಲೆಗೆ ಸೇರಿಸುವ ಸಂದರ್ಭದಲ್ಲಿ ತಂದೆಯ ಹೆಸರನ್ನು ನಮೂದಿಸಲು ಸಾಧ್ಯವಾಗದೇ ಇರುವುದು, ಸೂಳೆ ಎಂದು ಸಂಬೋಧಿಸುವುದು ಹೀಗೆ ಹಲವಾರು ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಒಂದೆಡೆಯಾದರೆ ಬಡತನ, ಅಜ್ಞಾನ, ಅನಕ್ಷರತೆ, ಅಂಧಕಾರತ್ವ, ಮೂಢನಂಬಿಕೆ ಮುಂತಾದ ಸಮಸ್ಯೆಗಳು ಕೂಡ ಕಾಡುತ್ತಿವೆ. ಇದಲ್ಲದೆ ದೇವದಾಸಿಯರ ಪುನರ್ವಸತಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಮಧ್ಯವರ್ತಿಗಳ ಪಾಲಾಗುತ್ತಿದೆ. ಇದಲ್ಲದೆ ಅವರ ಜೀವನ ನಿರ್ವಹಣೆಗೆ ಸರ್ಕಾರ ನೀಡುತ್ತಿರುವ ಮಾಸಾಶನ ಇವರ ಬದುಕಿಗೆ ಸಾಕಾಗುವುದಿಲ್ಲ.

ದೇವದಾಸಿ ಮಹಿಳೆಯರಿಗೆ ಸರ್ಕಾರ ಉದ್ಯೋಗ ತರಬೇತಿ ನೀಡಿದರೂ ಕೂಡ ಅದು ಉಪಯೋಗಕ್ಕೆ ಬರುತ್ತಿಲ್ಲ. ತರಬೇತಿ ಪಡೆದ ಮಹಿಳೆಯರು ಸ್ವಂತ ಉದ್ಯೋಗ ಮಾಡಲು ಹಣಕಾಸಿನ ನೆರವು ನೀಡಿದಾಗ ಮಾತ್ರ ಯೋಜನೆಗಳು ಪ್ರಯೋಜನಕಾರಿಯಾಗುತ್ತವೆ. ಭೂರಹಿತರಾಗಿರುವ ದೇವದಾಸಿ ಮಹಿಳೆಯರು ತಮ್ಮ ವೃತ್ತಿಯನ್ನು ತೊರೆದರೆ ಕುಟುಂಬದ ಸಮಸ್ಯೆ ನೀಗಿಸುವುದು ಹೇಗೆ? ಒಂದೊತ್ತಿನ ಕೂಳಿಗೂ ತೊಂದರೆಯಾಗುತ್ತದೆ. ಕೂಲಿಗೆ ಹೋದರೆ ಅಲ್ಲಿಯೂ ಜಮೀನ್ದಾರರು ಲೈಂಗಿಕವಾಗಿ ಶೋಷಿಸುತ್ತಾರೆ. ನಿಜ ಹೇಳಬೇಕೆಂದರೆ ನಾಯಿಯ ಬದುಕಿಗಿಂತಲೂ ನಮ್ಮ ಬದುಕು ಕಟ್ಟ ಕಡೆಯದಾಗಿದೆ ಎಂದು ತಮ್ಮ ನೋವನ್ನು ತೋಡಿಕೊಳ್ಳುತ್ತಾರೆ.

ಒಂದೆಡೆ ಸಮಾಜ ಇವರನ್ನು ಶೋಷಣೆ ಮಾಡಿದರೆ ಮತ್ತೊಂದೆಡೆ ಒಡಹುಟ್ಟಿದವರು ಮದುವೆಯಾಗುವ ಇವರ ಸಂಪಾದನೆಯಲ್ಲಿಯೇ ಬದುಕಿ ತಮ್ಮ ವಿವಾಹದ ನಂತರ ಇವರನ್ನು ಹೊರ ದೂಡುತ್ತಿರುವುದು ಶೋಚನಿಯ ಸಂಗತಿಯಾಗಿದೆ. ಅನೇಕ ದೇವದಾಸಿಯರು ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹೆಚ್‌ಐವಿ–ಏಡ್ಸ್ ರೋಗಕ್ಕೆ ತುತ್ತಾಗಿ ಜೀವತೆತ್ತವರಿದ್ದಾರೆ. ಜೀವನ ನಿರ್ವಹಣೆಗೆ ಭಿಕ್ಷೆ ಬೇಡಿ ಬದುಕುತ್ತಿರುವುದು, ಗುಡಿಸಿಲಿನಲ್ಲಿ ವಾಸ ಮುಂತಾದ ಸಮಸ್ಯೆಗಳ ಜೊತೆಗೆ ಸತ್ತ ಮೇಲೆ ನೆಮ್ಮದಿಯಾಗಿ ಸಂಸ್ಕಾರ ಮಾಡಲು ಕೂಡ ಸ್ಮಶಾನವಿಲ್ಲದೆ ಹಳ್ಳದ ದಂಡಿಗೆ ಸುಡುತ್ತಿರುವುದು ಕಂಡುಬರುತ್ತದೆ.

**ಬದಲಾಗುತ್ತಿರುವ ದೇವದಾಸಿಯರ ಜೀವನ ಪದ್ಧತಿ**

ಸಾಮಾಜಿಕ ಜಾಗೃತಿಯಿಂದಾಗಿ ದೇವದಾಸಿಯರು ಇಂದು ತಮ್ಮ ಮಕ್ಕಳನ್ನು ಒಳ್ಳೆಯ ಕಡೆ ವಿವಾಹ ಮಾಡಿಕೊಡುತ್ತಿದ್ದಾರೆ. ಸಮಾಜದಲ್ಲಿ ಇತರರ ಹಾಗೇ ಒಳ್ಳೆಯ ಬದುಕು ನಡೆಸಬೇಕೆಂಬ ಹಂಬಲದಿಂದ ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಿ ಉದ್ಯೋಗಗಳನ್ನು ಹಿಡಿದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದಾರೆ. ಹಾಗೆ ಒಳ್ಳೆಯ ಉದ್ಯೋಗಗಳನ್ನು ಪಡೆದುಕೊಳ್ಳುವಲ್ಲಿ ಮುಂದಾಗುತ್ತಿದ್ದಾರೆ. ಆರ್ಥಿಕವಾಗಿ ಸದೃಢರಾಗಿ, ಕೆಲವರಲ್ಲಿ ಬಡತನವಿದ್ದರೂ ಸ್ವಾಭಿಮಾನ, ಸ್ವಾವಲಂಬನೆ ಜೀವನ ಮಾಡುವಲ್ಲಿ ಪಣ ತೊಡುತ್ತಿದ್ದಾರೆ. ಹಾಗಾಗಿ ಇಂದು ದೇವದಾಸಿಯರು ಸಮಾಜದಲ್ಲಿ ಜನಸಾಮಾನ್ಯರಾಗಿ ಗಂಡ ಹೆಂಡತಿ ಮಕ್ಕಳು ಬಂಧುಬಳಗದವರ ಜೊತೆಗೆ ಅನ್ಯೂನ್ಯವಾಗಿರಲು ಬಯಸುತ್ತಿರುವುದು ಕಂಡು ಬರುತ್ತದೆ. ಅನೇಕ ದೇವದಾಸಿ ಕುಟುಂಬಗಳ ಮಕ್ಕಳು ಸಮಾಜದ ನಿಂದನೆಗೆ ಗುರಿಯಾಗಿ ಮಾನಸಿಕವಾಗಿ ನೊಂದು ಬೆಂದು ಅವರೇ ಸ್ವತಃ ತಾಯಿಯ ವಿರುದ್ಧ ನಿಂತು ಆ ಪದ್ಧತಿಯಿಂದ ಬಿಡುಗಡೆ ಹೊಂದುವಂತೆ ಹಾತೊರೆಯುತ್ತಿದ್ದಾರೆ. ಆದ್ದರಿಂದಲೇ ಕೆಲವು ದೇವದಾಸಿಯರು ತಮ್ಮನ್ನು ದೇವದಾಸಿಯರೆಂದು ಗುರುತಿಸಿಕೊಳ್ಳಲು ಬಯಸುತ್ತಿಲ್ಲ. ತಮ್ಮನ್ನು ತಾವು ಕಲಾವಿದೆಯರೆಂದು ಹೇಳಿಕೊಳ್ಳುತ್ತಿದ್ದಾರೆ. ಇವರಲ್ಲಿ ಜಾನಪದ ಕಲಾವಿದರಾಗಿ, ಗೀಗೀ ಪದ ಕಲಾವಿದರಾಗಿ ಮತ್ತು ವಿವಿಧ ಕಲಾರಂಗಗಳಲ್ಲಿ

ಪ್ರವೇಶಿಸಿ ಸಾಧನೆ ಮಾಡಿ ಉನ್ನತ ಸ್ಥಾನಮಾನವನ್ನು ಗಿಟ್ಟಿಸಿಕೊಳ್ಳುವಲ್ಲಿ ಮುಂದಾಗಿದ್ದಾರೆಂದು ತಿಳಿದು ಬರುತ್ತದೆ. ಬಾಗಲಕೋಟೆ ಜಿಲ್ಲೆಯ ಶ್ರೀಮತಿ ಎಲ್ಲವ್ವ ದುರುಗಪ್ಪ ರೊಡ್ಡಪ್ಪನವರ ಕಲಾರಂಗದ ಸಾಧನೆಯನ್ನು ಗುರುತಿಸಿ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಪದವಿಯನ್ನು ನೀಡಿ ಗೌರವಿಸಿದೆ. ಬೆಳಗಾಂ ಜಿಲ್ಲೆಯ ಕೋಕಟನೂರ ಗ್ರಾಮದ ಸುವರ್ಣ ಮಾದರ ಎಂಬ ಯುವತಿ ಪಿಎಚ್.ಡಿ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಬಹುದು. ಹೀಗೆ ದೇವದಾಸಿಯರಲ್ಲಿ ಹಲವಾರು ಮಹಿಳೆಯರು ಇಂದು ತಮ್ಮದೇ ಆದ ಸ್ಥಾನಮಾನಗಳನ್ನು ಹೊಂದಿರುವುದು ತಿಳಿದು ಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ದೇವದಾಸಿ ಪದ್ಧತಿಯು ದೇವರ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆಗೊಳಪಡಿಸುವ ಅತ್ಯಂತ ಹೀನ ಪದ್ಧತಿಯಾಗಿದೆ. ಇದರ ವಿರುದ್ಧ ಅನೇಕ ಹೋರಾಟ, ಜನಜಾಗೃತಿ ಶಿಬಿರ, ಸರ್ಕಾರದ ಪ್ರಯತ್ನದಿಂದಾಗಿ ದೇವದಾಸಿ ಪದ್ಧತಿಯನ್ನು ನಿಷೇಧಿಸಲಾಗಿದೆ. ಆದರೆ ಇಂದಿಗೂ ಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗಿಲ್ಲ. ಇವರ ಸಬಲೀಕರಣಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ ಆದರೆ ಅವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿದ್ದು ಈ ಅನಿಷ್ಟ ಪದ್ಧತಿಯಿಂದ ವಿಮುಖರಾಗುತ್ತಿರುವುದು ಆಶಾದಾಯಕ ಬೆಳವಣಿಗೆ ಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರ್ಜುನ ಗೊಳಸಂಗಿ. (1993). *ಜಾನಪದ ಸಾಹಿತ್ಯ: ದಲಿತರ ಬದುಕು ಮತ್ತು ಸಂಸ್ಕೃತಿ.* ಅಪ್ರಕಟಿತ ಪ್ರೌಢಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.
- ಚಂದ್ರಶೇಖರ ಹೆಚ್.ಆರ್. (2010). *ಕೊಪ್ಪಳ ಜಿಲ್ಲೆಯ ದೇವದಾಸಿಯರ ಸ್ಥಿತಿಗತಿಗಳ ವಿಶ್ಲೇಷಣಾತ್ಮಕ ನೋಟ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಚೆನ್ನಣ್ಣ ವಾಲೀಕರ್. (2006). *ಕರ್ನಾಟಕ ದೇವದಾಸಿಯರ ಸಾಮಾಜೋ ಧಾರ್ಮಿಕ ಆರ್ಥಿಕ, ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಸಮಸ್ಯೆಗಳ ಸಮಗ್ರ ಅಧ್ಯಯನ.* ದಲಿತ ಬಂಡಾಯ ಸಾಹಿತ್ಯ ಪ್ರಕಾಶನ.
- ಕಡೇತೋಟದ ಎನ್. ಕೆ. (1983). *ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ.*
- ಮುಳಗುಂದ ಚ.ವಿ. (1978). ಸಮಾಜಶಾಸ್ತ್ರ, ಸಾಮಾಜಿಕ ಸಮೂಹಗಳು ಮತ್ತು ಸಂಸ್ಥೆಗಳು.
- ತಾರಾದೇವಿ, ಪಿ.ಆರ್. (2006). *ಬೆಳಗಾವಿ ಜಿಲ್ಲೆಯ ದೇವದಾಸಿಯರ ಪುನರ್ವಸತಿ ಒಂದು ಅಧ್ಯಯನ.* ನ್ಯೂ ಡೆಲ್ಲಿ ಪಬ್ಲಿಕೇಷನ್.
- ವೀರಭದ್ರಪ್ಪ ಕುಂ. (2004). *ಕಪ್ಪು.* ಕನ್ನಡ ಸಾಹಿತ್ಯ ಪರಿಷತ್.
- ಸುರೇಶ ಕೆ. ಸಿ. (2010). *ದೇವದಾಸಿ ಪುನರ್ವಸತಿ ಬುಡುಕಟ್ಟು ಕಲ್ಯಾಣ ಕಾರ್ಯಕ್ರಮಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- Shingal, A. (2015). The Devadasi System: Temple prostitution in India. *UCLA Women's Law Journal*, *22*(1). https://doi.org/10.5070/l3221026367